# ಕಾಲ–ಕಾಲು

ಕಾಲು ಮತ್ತು ಕಾಲದ ನಡುವಣ ವ್ಯತ್ಯಾಸ ಒಂದು ಕೊಂಬಿನದಷ್ಟೇ. ಎರಡರ ಧಾತುವೂ ಚಲನಶೀಲತೆ. ಕಾಲ ಸ್ಥಗಿತಗೊಳ್ಳುವುದು ಅಥವಾ ಕಾಲು ಊನಗೊಳ್ಳುವುದು, ಎರಡರ ಪರಿಣಾಮವೂ ದುರಂತವೇ.

ಸ್ವಂತ ಕಾಲಿನ ಮೇಲೆ ನಿಲ್ಲು ಎನ್ನುವುದು ನಮ್ಮ ಪೂರ್ವಸೂರಿಗಳ ಅನುಭವ ಮಂಟಪದ ಕಾಣ್ಕೆಗಳಲ್ಲೊಂದು. ಕೈಕಾಲು ಗಟ್ಟಿಯಾಗಿವೆ ಎಂದರೆ ದುಡಿಯುವ ಶಕ್ತಿಯಿದೆ ಎಂದರ್ಥ. ಕಾಲಿನ ಮೇಲೆ ನಿಲ್ಲುವುದೆಂದರೆ ಸ್ವಾವಲಂಬಿ ಆಗುವುದೆಂದರ್ಥ. ಸ್ವಾಭಿಮಾನ ಹಾಗೂ ಆತ್ಮವಿಶ್ವಾಸ, ಸ್ವಾವಲಂಬನೆಯ ಉತ್ಪನ್ನಗಳು. ಹಾಗಾಗಿ, ಕಾಲಿನ ಮೇಲೆ ನಿಲ್ಲುವ ಪರಿಕಲ್ಪನೆಗೆ ಬದುಕಿನ ಸಾರ್ಥಕತೆ ಎಂದೂ ಸೀಮಿತ ಅರ್ಥದಲ್ಲಿ ಹೇಳಬಹುದು.

ಸ್ವಂತ ಕಾಲಿನ ಮೇಲೆ ನಿಲ್ಲುವ ಸ್ವಾವಲಂಬನೆ ಬದುಕಿನ ಉದ್ದೇಶಗಳಲ್ಲೊಂದಾದರೂ, ಅದುವೇ ಬಾಳಿನ ಗಮ್ಯವಲ್ಲ. ಬದುಕಿನ ಸಾರ್ಥಕತೆ ಇರುವುದು ದುರ್ಬಲರಿಗೆ ನಾವು ಕಾಲೋ ಊರುಗೋಲೋ ಆಗುವುದರಲ್ಲಿ. ಶ್ರವಣನಂತೆ ಭುಜದ ಮೇಲೆ ಹೊತ್ತು ಸಾಗುವುದು ಎಲ್ಲರಿಗೂ ಸಾಧ್ಯವಿಲ್ಲ. ಆದರೆ, ನಮ್ಮ ಪುಟ್ಟದೊಂದು ಸ್ಪಂದನವೂ ಮತ್ತೊಬ್ಬರ ಬದುಕಿಗೆ ಆಸರೆಯಾಗಬಲ್ಲದು. ಒಂಟಿಯಾಗಿ ಸಾಗುವ ಯಾವ ಪಯಣವೂ ಪರಿಪೂರ್ಣವಲ್ಲ. ನಮ್ಮೊಂದಿಗೆ ಎಷ್ಟು ಜನರನ್ನು ಮುನ್ನಡೆಸಿದವು ಎನ್ನುವುದು ಪಯಣದ ಪರಿಪೂರ್ಣತೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ.

ಕಾಲುಗಳನ್ನು ಗಮನಿಸಿ ವ್ಯಕ್ತಿಯ ಬದುಕಿನ ಸ್ಥಿತಿಗತಿ ತಿಳಿಯಬಹುದೆ? ಸಾಧ್ಯವಿದೆ. ಮುಖವನ್ನು ಓದುವುದು ಅನೇಕರಿಗೆ ಪ್ರಿಯವಾದ ಹವ್ಯಾಸವಷ್ಟೇ; ಕೆಲವರು ಕಾಲುಗಳನ್ನೂ ಓದಬಲ್ಲರು. ಮುಖ ಕೆಲವೊಮ್ಮೆ ಬಗೆಹರಿಯದ ಒಗಟಾಗಬಲ್ಲದು. ಮುಖದ ಕದಲಿಕೆಗಳನ್ನು ಮನಸ್ಸು ನಿಯಂತ್ರಿಸಬಲ್ಲದು. ಕಾಲಿನ ಚಲನೆಯನ್ನು ಮನಸ್ಸು ನಿಯಂತ್ರಿಸಬಲ್ಲದೇ ಹೊರತು, ಸ್ವರೂಪವನ್ನಲ್ಲ. ಹಾಗಾಗಿ, ಕಾಲಿನ ಹೊರಾವರಣವನ್ನೂ ಆಂಗಿಕ ಅಭ್ಯಾಸವನ್ನೂ ಗಮನಿಸಿ ವ್ಯಕ್ತಿಯ ಲಿಂಗ, ಸಾಮಾಜಿಕ ಸ್ಥಾನಮಾನ, ವ್ಯಕ್ತಿತ್ವದ ಒಲವು ಚೆಲುವುಗಳನ್ನು ಸ್ಥೂಲವಾಗಿಯಾದರೂ ಅಂದಾಜಿಸಬಹುದಾಗಿದೆ. ಪಾದಗಳಲ್ಲಿನ ಬಿರುಕುಗಳು, ಕಾಲಿನ ನರಗಳ ಉಬ್ಬುತಗ್ಗುಗಳು ಗಂಟುಗಳು, ಚರ್ಮದ ಬಣ್ಣ, ಉಗುರುಗಳ ಆರೋಗ್ಯ ಮತ್ತು ಸೌಂದರ್ಯ – ಇವೆಲ್ಲವೂ ವ್ಯಕ್ತಿಯ ಸಾಮಾಜಿಕ ಸ್ಥಿತಿಗೆ ಕನ್ನಡಿ ಹಿಡಿಯಬಲ್ಲವು.

ಕಾಲುಗಳು ಪರಿಚಯಪತ್ರಗಳಂತಿದ್ದರೂ, ಅವುಗಳನ್ನು ಮಲತಾಯಿ ಮಕ್ಕಳಂತೆ ನೋಡುವುದೇ ಹೆಚ್ಚು. ಕೈಗಳ ಕಾಳಜಿ, ಸೌಂದರ್ಯಕ್ಕೆ ನೀಡುವ ಗಮನ ಕಾಲುಗಳಿಗೆ ದೊರೆಯುವುದಿಲ್ಲ. ಸ್ಪರ್ಶದ ದೃಷ್ಟಿಯಲ್ಲೂ ಕಾಲುಗಳಿಗೆ ಮರ್ಯಾದೆ ಕಡಿಮೆ. ಕೈಗಳ ಸ್ಪರ್ಶವನ್ನು ವಾತ್ಸಲ್ಯ, ಅಭಯ, ಆಶೀರ್ವಾದದ ದೃಷ್ಟಿಯಿಂದ ನೋಡಿದರೆ, ಪಾದಸ್ಪರ್ಶವನ್ನು ಅವಮಾನವೆಂದು ತಿಳಿಯುವ ಸಾಧ್ಯತೆಗಳೇ ಹೆಚ್ಚು. ಕೈಗಳನ್ನು ಹಿಡಿಯುವುದು ವಿಶ್ವಾಸದ ಸಂಕೇತವಾದರೆ, ಕಾಲುಗಳನ್ನು ಹಿಡಿಯುವುದು ದೈನ್ಯದ ಸಂಕೇತ. ಕೈಹಿಡಿದು ಎತ್ತುವುದು ನಡೆಸುವುದು ಒಳ್ಳೆಯತನದ ನಡವಳಿಕೆ; ಕಾಲೆಳೆಯುವುದು ಕಿಡಿಗೇಡಿತನ.

'ನಡೆದಷ್ಟೂ ನಾಡು' ಎನ್ನುವುದು ರಹಮತ್ ತರೀಕೆರೆ ಅವರ ಅಂಕಣ ಬರಹಗಳ ಸಂಕಲನದ ಹೆಸರು. ಈ ಮಾತನ್ನು 'ನಡೆದಷ್ಟೂ ನೋಟ' ಎಂದು ಬದಲಿಸಿಕೊಂಡರೂ ಹೆಚ್ಚಿನ ವ್ಯತ್ಯಾಸವಾಗದು. 'ನಡೆದು ನಾಡು ನೋಡು' ಎನ್ನುವ ಮಾತೂ ಇದೆ. ನಡಿಗೆಯಿಂದ ನೋಟಕ್ಕೆ ದೊರಕುವ ಅನುಭವ ಶ್ರೀಮಂತಿಕೆ ವಾಹನಗಳ ಮೂಲಕ ಕೈಗೊಳ್ಳುವ ಪಯಣಗಳಲ್ಲಿ ದೊರೆಯದು. ನೋಟ ಸಾಧ್ಯವಾಗುವುದು ಕಣ್ಣಿನ ಮೂಲಕವಾದರೂ, ಆ ನೋಟಕ್ಕೆ ಕಾಣ್ಕೆಯ ರೂಪ ದೊರೆಯಲು ಕಾಲಿನ ಬಲವೂ ಬೇಕು. ಕಾಲಿನ ಸಹನೋಟವಿಲ್ಲದೆ ಹೋದರೆ ಕಣ್ಣೂ ಕುಂಟುವುದು; ಕೂಪದೊಳಗಿನ ಮಂಡೂಕದ ಪಾಡು ಒದಗುವುದು. ಸ್ಟೀಫನ್ ಹಾಕಿಂಗ್‌ರಂತಹ ಧೀಮಂತರಷ್ಟೇ ಕಾಲಾತೀತರಾಗಿ ಕಾಲಿಗೂ ಅತೀತರಾಗಿ ಬದುಕನ್ನು ರೂಪಿಸಿಕೊಳ್ಳಬಲ್ಲರು; ಗಾಲಿ ಕುರ್ಚಿಯಲ್ಲಿ ನಿಶ್ಚಲರಾಗಿ ಕುಳಿತೇ ಕಪ್ಪುಕುಳಿಗಳ ಆಳಕ್ಕೂ ಬೆಳಕು ಚೆಲ್ಲಬಲ್ಲರು; ಬಾಳ್ವೆಯನ್ನೇ ಬೆಳಕಾಗಿಸಿಕೊಳ್ಳುವರು.

ನಡಿಗೆಯಿಂದ ಬಹುದೊಡ್ಡ ಜೀವನದರ್ಶನ ಗಳಿಸಿಕೊಂಡವರಲ್ಲಿ ಮಹಾತ್ಮ ಗಾಂಧಿ ಮುಖ್ಯರಾದವರು. ದುರ್ಬಲ ದೇಹದ ಶಕ್ತಿಯೆಲ್ಲ ಸಂಚಯಗೊಂಡಂತೆ ಅವರ ದೇಹದಲ್ಲಿನ ಕಾಲುಗಳು ಸೆಟೆದ ಕೋಲುಗಳಂತೆ ಕಾಣಿಸುತ್ತವೆ. ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಗಾಂಧೀಜಿ, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವ ಮುನ್ನ ದೇಶ ಸುತ್ತಿದರು. ರೈಲಿನ ಮೂರನೇ ದರ್ಜೆಯಲ್ಲಿ ಪ್ರಯಾಣಿಸಿದರೂ, ಜೀವನದುದ್ದಕ್ಕೂ ಕಾಲುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರು. ಮಹಾತ್ಮನ ದಂಡಿ ಯಾತ್ರೆ ನಡಿಗೆಯ ಶಕ್ತಿಗೊಂದು ಅಪೂರ್ವ ನಿದರ್ಶನ. 1930ರ ಮಾರ್ಚ್ 12ರಿಂದ ಏಪ್ರಿಲ್ 30ರವರೆಗೆ, ಗುಜರಾತಿನ ಸಾಬರಮತಿ ಆಶ್ರಮದಿಂದ ದಂಡಿಯ ಕಡಲತಡಿಯವರೆಗೆ ನಡೆದ 241 ಮೈಲಿಗಳ ಪಾದಯಾತ್ರೆ, ದೇಶದ ಉದ್ದಗಲಕ್ಕೂ ಸ್ವಾತಂತ್ರ್ಯದ ಜಾಗೃತಿಯನ್ನು ಮೂಡಿಸಿತು. ದೀನದಲಿತರ ಕೇರಿಗಳಿಗೆ, ರೋಗಿಗಳ ಶುಶ್ರೂಷೆಗೆ ತೆರಳುವ ಮೂಲಕ ಗಾಂಧಿಯವರ ಪಾದಗಳು ಪವಿತ್ರವಾದವು.

ಧನಬಲದಿಂದ, ಅಧಿಕಾರದಿಂದ ಕಾಲವನ್ನು ಕಾಲನ್ನೂ ಕೊಳ್ಳುವ ಪ್ರಯತ್ನ ನಡೆಸಿದವರ ಉದಾಹರಣೆಗಳಿವೆ. ಈ ಪ್ರಯತ್ನ ಅವರನ್ನು ಬಹುದೂರ ನಡೆಸದಷ್ಟೇ. ಕಾಲದೊಂದಿಗಿನ ಪಯಣದಲ್ಲಿ ಕಾಲು ಸೋಲದವರ ಉದಾಹರಣೆಗಳಿಲ್ಲ. ಕಾಲಿಗೊಂದು ಕೊಂಬಿದ್ದರೂ ಅದು ಕಾಲವನ್ನು ಮೀರುವುದು ಸಾಧ್ಯವಿಲ್ಲ. ಕಾಲಿನ ಜೊತೆಗಿನ ಕೊಂಬು ಇಲ್ಲವಾಗಿ ಕಾಲವೇ ಆಗುವುದು ಪ್ರಕೃತಿ ನಿಯಮ, ಅಂತಿಮಸತ್ಯ.

ಮುಪ್ಪು ನಮ್ಮ ಕಾಲುಗಳ ಶಕ್ತಿ ಕಸಿದುಕೊಳ್ಳುತ್ತದೆ. ಆಕಸ್ಮಿಕ ಸಂದರ್ಭಗಳಲ್ಲೂ ಕಾಲುಗಳು ಬಲಿಯಾಗಬಹುದು. ಆಗ ಮೂಲೆ ಹಿಡಿಯುವುದು ಅನಿವಾರ್ಯ. ಕಾಲುಗಳನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿ ಕಾಲವೂ ಕುಂಟತೊಡಗುತ್ತದೆ. ಅಂಥ ಸಂದರ್ಭವನ್ನು ಎದುರಿಸಲು ಎದೆಗಾರಿಕೆ ಬೇಕು. ಕುಟುಂಬದ ಮಮತೆಯ ಊರುಗೋಲು ಬೇಕು. ಅಸಹಾಯಕ ಸಂದರ್ಭಗಳಲ್ಲೇ ಮನುಷ್ಯ ಹೆಚ್ಚು ಕ್ರಿಯಾಶೀಲನೂ ಸೃಜನಶೀಲನೂ ಆಗುವುದು. ಭೌತಿಕ ಕಾಲು ಊನಗೊಂಡರೇನು, ನಮ್ಮ ಮನಸ್ಸಿಗೂ ಕಾಲುಗಳಿವೆಯಷ್ಟೇ. ಆ ಕಾಲುಗಳು ಚಲನಶೀಲವಾಗಿರುವಂತೆ ನೋಡಿಕೊಳ್ಳುವುದು ಸಾಧ್ಯವಾದರೆ, ಕಾಲವೂ ನಮ್ಮ ಕೈಹಿಡಿಯುತ್ತದೆ. ಕಾಲಾಯ ತಸ್ಮೈ ನಮಃ ಎನ್ನುವ ಮಾತಿನಲ್ಲಿ ಕಾಲಷ್ಟೇ ಇಲ್ಲ; ಕಾಲೂ ಇದೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಇನ್ನೊಬ್ಬರಿಗೆ ಅನ್ಯಾಯವಾಗದ ರೀತಿಯಲ್ಲಿ ಬದುಕುವುದು, ಪರರಿಗೆ ಸುಖ ಕೊಡಲು ಬಾರದೆ ಹೋದರೆ, ದುಃಖ ಕೊಡದೆ ಇರುವುದಪ್ಪ.

  —ಶಿವರಾಮ ಕಾರಂತ

- ಅಹಂಕಾರವಿಲ್ಲದ ಮನುಷ್ಯ ಯಾವ ಧರ್ಮಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪಡೆಯಬಹುದು.

  —ಸ್ವಾಮಿ ವಿವೇಕಾನಂದ

- ಸಾಮಾನ್ಯ ವಿವೇಚನೆಯು ಪ್ರಪಂಚದಲ್ಲಿ ಅತ್ಯಂತ ಅಸಾಮಾನ್ಯವಾದ ವಸ್ತು.

  —ಮಹಾಭಾರತ

- ದೇವರನ್ನು ಪ್ರೀತಿಯ ರೂಪದಲ್ಲಿ ನೋಡಬೇಕು. ಮಂದಿರ – ಮಸೀದಿ ರೂಪದಲ್ಲಲ್ಲ.

  —ಕಬೀರ

- ಸತ್ಯದಲಿ ಶಿವವಿಹುದು ಶಿವದಲ್ಲಿ ಸತ್ಯವಿದೆ. ಮೇಣೆರಡು ಸೌಂದರ್ಯದಲಿ ಲೀನವಾಗಿಹವು.

  —ಕುವೆಂಪು